ಕಂಪೇರ್ ಮಾಡಲಿಕ್ಕೆ ಹೋಗಬೇಡಿ. ಇದರಲ್ಲಿ ಸೌಲಭ್ಯ ಒದಗಿಸಬೇಕು ಎನ್ನುವುದು ಸರ್ಕಾರದ ಉದ್ದೇಶ ಇರಬೇಕು, ಇದರಿಂದ ನಾವು ಸರ್ಕಾರಕ್ಕೆ ಆದಾಯ ಮಾಡಿಕೊಳ್ಳುವಂಥ ಉದ್ದೇಶ ಇರಬಾರದು. ಆದ್ದರಿಂದ ದಯಮಾಡಿ ತಮ್ಮ ಅಭಿಪ್ರಾಯವನ್ನು ಬದಲು ಮಾಡಬೇಕು. ಇದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅದನ್ನು ಯೋಚನೆ ಮಾಡಲಾಗುವುದು.

ಉಪಾಧ್ಯಕ್ಷರು : ಶ್ರೀ ಶಿವಾನಂದ ಸಿದ್ಧರಾಮಪ್ಪ ಪಾಟೀಲ್ (ಟಿಕೋಟಾ) ಅವರ ಗಮನ ಸೆಳೆಯುವ ಸೂಚನೆಗೆ ನಾಳೆಯ ದಿವಸ ಮಾನ್ಯ ಸಚಿವರು ಹೇಳಿಕೆಯನ್ನು ಕೊಡುತ್ತಾರೆ.

ನಿಯಮ 351ರ ಮೇರೆಗೆ

(1) ಖಾಸಗಿ ಶಾಲೆಗಳಿಗೆ ಶಾಶ್ವತವಾಗಿ ಅನುಧಾನವನ್ನು ಕೊಡುವುದಿಲ್ಲವೆಂದು ಹೇಳಿರುವ ಬಗ್ಗೆ ಅನುಧಾನ ರಹಿತ ಶಾಲೆಯ ಶಿಕ್ಷಕರು, ಮತ್ತು ನೌಕರುಗಳು ಚಳುವಳಿ

ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಖಾಸಗಿ ಶಾಲೆಗಳಿಗೆ ಶಾಶ್ವತವಾಗಿ ಅನುಧಾನವನ್ನು ಕೊಡುವುದಿಲ್ಲವೆಂದು ಹೇಳಿರುವ ಬಗ್ಗೆ ಅನುಧಾನ ರಹಿತ ಶಾಲೆಯ ಶಿಕ್ಷಕರು ಮತ್ತು ನೌಕರುಗಳು ಚಳುವಳಿಯನ್ನು ನಡೆಸುತ್ತಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ.ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣವನ್ನು ನೀಡುವುದು ಒಂದು ಸಾಮಾಜಿಕ ಕರ್ತವ್ಯ ಇಂತಹ ಸಾಮಾಜಿಕ ಕರ್ತವ್ಯವನ್ನು ಸರ್ಕಾರ ಸದಾ ನಿರ್ವಹಿಸುತ್ತಿದೆ. ಇದಕ್ಕಾಗಿ ಅಗತ್ಯತೆಗೆ ಅನುಗುಣವಾಗಿ ರಾಜ್ಯದಲ್ಲಿ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ಸರ್ಕಾರವು ಎಲ್ಲಾ ಮೂಲಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಾಕಷ್ಟು ಆಯವ್ಯಯದಲ್ಲಿ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದೆ. ಸರ್ಕಾರ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದರೂ ಶಿಕ್ಷಣವನ್ನು ಎಲ್ಲಾರಿಗೂ ನೀಡಲು ಸಾಧ್ಯವಾಗುತ್ತಿಲ್ಲ. ಇಂತಹ ಸಮಯದಲ್ಲಿ ಸಾರ್ವಜನಿಕರ ಸಹಕಾರ ತುಂಬಾ ಅಗತ್ಯ. ಅನೇಕ ಸಂಘ ಸಂಸ್ಥೆಗಳು ಶಾಲೆಗಳನ್ನು ಪ್ರಾರಂಭಿಸಲು ಮುಂದೆ ಬರುತ್ತಿದ್ದು, ಶಾಲೆಗಳನ್ನು ತೆರೆಯಲು ಅನುಮತಿಯನ್ನು ನೀಡಲಾಗುತ್ತಿತ್ತು. ಹಾಗೂ ಧಾರಾಳವಾಗಿ ಅನುದಾನಗಳನ್ನು ಈರೀತಿಯ ಶಾಲೆಗಳಿಗೆ ಈಗ ಅನುದಾನವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಅನೇಕ ಸಂಘ ಸಂಸ್ಥೆಗಳು ತನ್ನ ಸಂಪನ್ಮೂಲಗಳಿಂದಲೇ ಶಾಲೆಗಳನ್ನು ನಡೆಸುವುದಾಗಿ ಒಪ್ಪಿ ಶಾಶ್ವತ ಅನುದಾನ ರಹಿತವಾಗಿ ಶಾಲೆಗಳನ್ನು ತೆರೆಯಲು ಮನವಿಗಳನ್ನು ಸಲ್ಲಿಸಿರುವುದನ್ನು ಸರ್ಕಾರವು ಪರಿಶೀಲಿಸಿ ಶಾಶ್ವತ ಅನುದಾನ ರಹಿತ ಆಧಾರದ ಮೇಲೆ ಶಾಲೆಗಳನ್ನು ತೆರೆಯಲು ಪರವಾನಗಿಯನ್ನು ನೀಡಲಾಗುತ್ತಿದೆ. ಇದುವರೆವಿಗೂ ಸುಮಾರು 2,494 ಶಾಶ್ವತ ಅನುದಾನ ರಹಿತ ಪ್ರೌಢಶಾಲೆಗಳನ್ನು ಮತ್ತು 1,813ಶಾಶ್ವತ ಅನುದಾನ ರಹಿತ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸರ್ಕಾರ ಅನುಮತಿಯನ್ನು ನೀಡಲಾಗಿದೆ. ಈ ಶಾಲೆಗಳನ್ನು ತೆರೆಯಲು ಶಾಶ್ವತ ಅನುದಾನ ರಹಿತ ಆಧಾರದ ಮೇಲೆ ಮಂಜೂರು

ಮಾಡಿರುವುದರಿಂದ ಈ ರೀತಿಯ ಶಾಲೆಗಳಿಗೆ ಅನುದಾನವನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಿಬ್ಬಂದಿಗಳಿಗೆ ವೇತನವನ್ನು ನೀಡುವುದು ಆಡಳಿತ ಮಂಡಲಿಯ ಜವಾಬ್ದಾರಿಯಾಗಿರುತ್ತದೆ.

(2) ಡಾ॥ ಹೇಮಾರೆಡ್ಡಿ ಸಹ ನಿರ್ದೇಶಕರು, ಆರೋಗ್ಯ ಇಲಾಖೆ ಇವರ ಮೇಲಿನ ದೂರುಗಳು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉಪಾಧ್ಯಕ್ಷರೆ, ಡಾ. ಹೇಮಾರೆಡ್ಡಿ, ನಿರ್ದೇಶಕರು, ಆರೋಗ್ಯ ಇಲಾಖೆ ಇವರ ಮೇಲೆ ಅನೇಕ ದೂರುಗಳ ಬಗ್ಗೆ ನಿಯಮ 351 ಮೇರೆಗೆ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರೇ, ನಾನು ಇದನ್ನು ಓಡಿಬಿಡುತ್ತೇನೆ, ಏಪ್ರಿಲ್ 1993ನೇ ಇಸವಿಯ ಲಕ್ಷಾಂತರ ರೂಪಾಯಿಯ ಬೇಲೆ ಇರುವ ಮಾತ್ರೆಗಳನ್ನು ನಾಶಮಾಡಿದ್ದಕ್ಕೆ ಆರೋಗ್ಯ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಇದ್ದ ಡಾ॥ ಎಂ.ಬಿ. ಹೇಮಾರೆಡ್ಡಿ ವಿರುದ್ಧವಾಗಿ ಅನೇಕ ದೂರುಗಳು, ಅನೇಕ ಸಾಕ್ಷಿ ದಾಖಲೆಗಳು ಸರ್ಕಾರದ ಕೈಯಲ್ಲಿ ಇದ್ದು ಸರ್ಕಾರವು ವಿಚಾರಣೆಯನ್ನು ನಡೆಸಲಿಲ್ಲ. ಮಾರ್ಚ 1994 ರಂದು ಡಾ॥ ಹೇಮಾರೆಡ್ಡಿ ನಿರ್ದೇಶಕರು, ಆರೋಗ್ಯ ಇಲಾಖೆ. ಇವರಿಗೆ ಬೇಡದವರನ್ನು ಮತ್ತು ಇವರ ಮೇಲೆ ದೂರು ಕೊಟ್ಟವರನ್ನು ವರ್ಗಾಯಿಸಿ, ಗೋಳಾಡಿಸುತ್ತಿದ್ದಾರೆಂದು ದಿನಾಂಕ: 19-1-96ರಂದು ಕೆಲವು ಕನ್ನಡ ವಾರಪತ್ರಿಕೆಗಳಲ್ಲಿ ಬಂದಿದ್ದು, ಈ ಬಗ್ಗೆ ಸರ್ಕಾರ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಅಲ್ಲದೆ ಮತ್ತೆ ದಿನಾಂಕ: 24-2-96 ರಂದು ಹಾಗೂ 1-3-96ರಲ್ಲಿಯೂ ಇದೇ ಪತ್ರಿಕೆಯಲ್ಲಿ ಇವರ ಅವ್ಯವಹಾರಗಳ ಬಗ್ಗೆ ತಿಳಿಸಿದ್ದರೂ ನಿರ್ದೇಶಕರಾದ ಡಾ॥ ಹೇಮಾರೆಡ್ಡಿಯವರ ಮೇಲೆಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಮತ್ತು ಡಾ॥ ಹೇಮಾರೆಡ್ಡಿ ವಿರುದ್ಧವಾಗಿ ಸಿವಿಲ್ ರೈಟ್ ಎನಫೋರ್ಸಮೆಂಟ್ ಸೆಲ್, ಸಿ.ಐ.ಡಿ. ವಿಭಾಗದವರು ವಿಚಾರಣೆಯನ್ನು ನಡೆಸಿರುವುದು ನಿಜವೇ ಮತ್ತು ಅಲ್ಲಿ ನಡೆಯುತ್ತಿರುವ ವಿಚಾರಣೆ ಯಾವುದು? ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್: 13ಎಸ್ ಬಿಇ : 85 ದಿನಾಂಕ 3-7-95ರ ಪ್ರಕಾರ ಡಾ॥ ಹೇಮಾರೆಡ್ಡಿಯವರನ್ನು ಕೂಡಲೇ ಅನುಮಾನತ್ತಿನಲ್ಲಿಟ್ಟು ಸರ್ಕಾರ ಏಕೆ ವಿಚಾರಣೆಯನ್ನು ಪ್ರಾರಂಭಿಸಿಲ್ಲ ಎಂಬ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳಿಂದ ಸ್ಪಷ್ಟೀಕರಣವನ್ನು ಅಪೇಕ್ಷಿಸುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 1996ರಲ್ಲಿ ಡಾ॥ ಎಂ.ಪಿ. ಹೇಮಾರೆಡ್ಡಿ ಸಹ ನಿರ್ದೇಶಕರು (ಕೃಷ್ಣ) ಈ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಜರ್ಮನ ಲೆಪ್ರಸಿ ಅಸೋಸಿಯೇಷನ್ ಜಿ.ಎಲ್.ಆರ್. ಮದ್ರಾಸಿನಿಂದ, ಉಚಿತವಾಗಿ ಬರುವ ಔಷಧಿಯನ್ನು ಬೇರೆ ಬೇರೆ ಜಿಲ್ಲೆಗಳಿಗೆ ಹಂಚಿ ಅಯ್ಯಾಯ ಜಿಲ್ಲೆಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಈ ವಿಷಯವನ್ನು ಸಂಬಂಧಪಟ್ಟಂತಹ ಅಂತರರಾಷ್ಟ್ರೀಯ ಸಂಸ್ಥೆಯಿಂದ ಪ್ರತಿತಿಂಗಳ ಔಷಧಿಗಳ ದಾಸ್ತಾನುಗಳ ಲೆಕ್ಕ ಪತ್ರಗಳನ್ನು ಮಾಸಿಕವಾಗಿ ಪರಿಶೀಲನೆಯನ್ನು ಮಾಡಲಾಗುತ್ತಿತ್ತು. ಈ ವಿಚಾರದಲ್ಲಿ ಇದುವರೆವಿಗೂ ಯಾವ ದೂರುಗಳು ಬಂದಿಲ್ಲ. ಡೈಯಾಫಸಾಲ್ ಎಂಬ ಸ್ಥಳೀಯ ಮಾತ್ರೆ ಹೆಚ್ಚಾಗಿ ಸರಬರಾಜು ಆಗಿದ್ದು ರಾಜ್ಯದಲ್ಲಿ ಆ ಮಾತ್ರೆಗಳನ್ನು ಹೆಚ್ಚಾಗಿ ಉಪಯೋಗಿಸಲಾಗಿದೆ. ಭಾರತ